**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 02-09-2023.**

**ಪಾಟೀ ಸವಾಲು - ಪ್ರತಿವಾದಿಯ ಪರ ವಕೀಲರಿಂದ :**

**1)** ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ಸಂಖ್ಯೆ 229, ಪಶ್ಚಿಮಕ್ಕೆ ಸರ್ವೆ ಸಂಖ್ಯೆ 231, ಉತ್ತರಕ್ಕೆ ಸರ್ವೆ ಸಂಖ್ಯೆ 234 ಹಾಗೂ ದಕ್ಷಿಣಕ್ಕೆ ಕಗ್ಗಲಹಳ್ಳಿ ಗ್ರಾಮದ ಗಡಿ ಮತ್ತು ರಸ್ತೆ ಇರುತ್ತವೆ. ದಾವಾ ಆಸ್ತಿ ಮೂಲತಃ ಗೋಮಾಳ ಜಾಗ ಆಗಿತ್ತು. ದಾವಾ ಸ್ವತ್ತಿನ ಹಳೇ ಸರ್ವೆ ಸಂಖ್ಯೆ 149 ಆಗಿತ್ತು. ಮುತ್ಯಾಲಪ್ಪ ಅವರಿಗೆ ಯಾವ ಬ್ಲಾಕ್ ನಲ್ಲಿ ಮಂಜೂರಾತಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಜಮೀನಿನ ನಕ್ಷೆಯನ್ನು ನನಗೆ ತೋರಿಸಿದರೆ ನಾನು ಗುರುತಿಸುತ್ತೇನೆ. ನಿ.ಪಿ.6 ರಲ್ಲಿ ಮುತ್ಯಾಲಪ್ಪ ಅವರಿಗೆ ಮಂಜೂರು ಆಗಿರುವ ಜಮೀನು ಕೆಳಗಡೆ (ಎಡಭಾಗದಲ್ಲಿ) ಮೇಲಿನಿಂದ ಕ್ರಮ ಸಂಖ್ಯೆ 4 ನೇಯದ್ದಾಗಿರುತ್ತದೆ. ಮಂಜೂರಾತಿಯಾದಾಗ ಮುತ್ಯಾಲಪ್ಪ ಅವರ ಸ್ವತ್ತಿನ ಉತ್ತರಕ್ಕೆ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಯಾರಿಗೆ ಮಂಜೂರಾತಿಯಾಗಿರುತ್ತದೆ ಎಂಬ ಮಾಹಿತಿಯನ್ನು ನಮಗೆ ನೀಡಿರುವುದಿಲ್ಲ. ನಿ.ಪಿ.7 ರ ಪ್ರಕಾರ ಮುತ್ಯಾಲಪ್ಪ ಅವರ ಸ್ವತ್ತಿನ ಅಕ್ಕ-ಪಕ್ಕದಲ್ಲಿ ಯಾರ ಜಮೀನಿತ್ತು ಎಂದು ಸ್ಪಷ್ಟ ಮಾಹಿತಿ ನೀಡಿರುವುದಿಲ್ಲ. ನಮ್ಮ ಕುಟುಂಬದವರು ಅನುವಂಶಿಕವಾಗಿ ತಳವಾರ ಕೆಲಸವನ್ನು ಸಹ ಮಾಡಿಕೊಂಡು ಬಂದಿದ್ದರು. ಸಾಮಾನ್ಯವಾಗಿ ಚಾಕರಿ ಕೆಲಸ ಮಾಡಿಕೊಂಡು ಬರುವವರಿಗೆ ಸದರಿ ಬಿರುದಿನ ಜೊತೆಯಲ್ಲಿ ಹೆಸರನ್ನು ಕರೆಯುವುದು ವಾಡಿಕೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾತ ತಳವಾರ ಮುತ್ಯಾಲಪ್ಪ ಎಂದು ಚಿರಪರಿಚಿತರಾಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ನನಗೆ ನಮ್ಮ ತಾತ ಅವರ ಸಹೋದರ ಸಹೋದರಿಯರ ಬಗ್ಗೆ ಅಷ್ಟೊಂದು ಮಾಹಿತಿ ಇಲ್ಲ. ನಮ್ಮ ತಾತ ಮುತ್ಯಾಲಪ್ಪ ಅವರಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಮುತ್ಯಾಲಪ್ಪ ಎನ್ನುವ ವ್ಯಕ್ತಿ ನಮ್ಮ ತಂದೆಯಾಗಿದ್ದು, ಅವರು ಮರಣ ಹೊಂದಿರುವುದರಿಂದ ತನ್ನ ಹೆಸರಿಗೆ ದಾವಾ

ಸ್ವತ್ತಿನ ಖಾತೆಯಾಗಬೇಕು ಎಂದು ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ತಾತನ ಮೇಲಿನ ತಲೆಮಾರಿನವರ ಬಗ್ಗೆ ನನಗೆ ಮಾಹಿತಿ ಇಲ್ಲ. ಚಿಕ್ಕಪಾಪಯ್ಯ, ಪೋತಲಪ್ಪ, ನಾರಾಯಣಪ್ಪ ಎನ್ನುವವರು ನಮ್ಮ ವಂಶಸ್ಥರಲ್ಲ. ಚಿಕ್ಕವೆಂಕಟಪ್ಪ, ದೊಡ್ಡ ರಾಮಪ್ಪ, ದೊಡ್ಡ ವೆಂಕಟಪ್ಪ, ಮುನಿಯಪ್ಪ ನಮ್ಮ ತಾತನ ಸಂಬಂಧಿಕರು. ಮುನಿವೆಂಕಟಪ್ಪ, ಮುನಿಶಾಮಪ್ಪ ಇತ್ಯಾದಿ ಸದರಿ ಊರಿನಲ್ಲಿ ಸರ್ವೇ ಸಾಮಾನ್ಯವಾಗಿ ಕಂಡುಬರುವ ಹೆಸರುಗಳು ಎಂದರೆ ಸರಿ. ನಮ್ಮ ತಾತನ ತಂದೆಯ ಹೆಸರು ಮುನಿಶಾಮಪ್ಪ ಆಗಿರುತ್ತದೆ. ಅದೇ ಹೆಸರಿನವರು ಬೇರೆ ಹೆಸರಿನವರೂ ಸಹ ಇರುತ್ತಾರೆ. ಮುನಿಶಾಮಪ್ಪ ಅವರ ವಂಶವನ್ನು ತಿಳಿದುಕೊಳ್ಳದೇ ಅದೇ ಮುನಿಶಾಮಪ್ಪ ಎಂದು ಗುರುತಿಸುವುದು ಕಷ್ಟ ಎಂದರೆ ಸರಿ. ನಿ.ಪಿ.3 ನ್ನು ನಮ್ಮ ತಂದೆಯೇ ಪ್ರಮಾಣೀಕರಿಸಿ ಪಡೆದುಕೊಂಡ ದಾಖಲೆ. ನಮ್ಮ ತಂದೆ ಮತ್ತು ನಮ್ಮ ತಾತನ ತಮ್ಮ ಮುನಿಯಪ್ಪ ಸೇರಿ 1979 ಕ್ಕಿಂತ ಪೂರ್ವದಲ್ಲಿ ಮುತ್ಯಾಲಪ್ಪ ಅವರು ಮರಣ ಹೊಂದಿರುತ್ತಾರೆ ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ತಂದೆಗೆ ಆ ಬಗ್ಗೆ ಸ್ಪಷ್ಟ ಮಾಹಿತಿ ಇರಲಿಲ್ಲ ಹಾಗೂ ಆರೋಗ್ಯ ಸರಿಯಿರಲಿಲ್ಲ, ಅಂದಾಜಿನ ಮೇಲೆ ದಿನಾಂಕವನ್ನು ಹೇಳಿ ನಿ.ಪಿ.3 ನ್ನು ಪಡೆದುಕೊಂಡಿರುತ್ತೇನೆ. ಮುನಿರಾಮಯ್ಯ ಅವರ ಬೇರೆ ಯಾವುದೇ ಸಹೋದರ ಸಹೋದರಿಯರು ಇಲ್ಲ. ನಿ.ಡಿ.1 ರ ಪ್ರಕಾರ ನಮ್ಮ ತಂದೆಗೆ ಒಟ್ಟು 25-26 ಎಕರೆ ಜಮೀನಿನಲ್ಲಿ ಅರ್ಧ ಭಾಗ ನೀಡಿರುತ್ತಾರೆ ಎಂದರೆ ಅಷ್ಟು ಭಾಗ ಬರೆದಿರಬಹುದು, ಆದರೆ ನೀಡಿರುವುದಿಲ್ಲ. ನಿ.ಡಿ.1 ರ ಪ್ರಕಾರ ಮುತ್ಯಾಲಪ್ಪ ಅವರು ಗಂಗವಾರ ಚೌಡಪ್ಪನ ಹಳ್ಳಿ, ತಳವಾರ ಮತ್ತು ಬೂದಿಗೆರೆ ಅಮಾನಿಕೆರೆ ನೀರಗಂಟಿ ಗಳಲ್ಲಿ ತಳವಾರ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾತನಿಗೆ ಆ ಕಾಲದಲ್ಲಿ ಸರ್ಕಾರಿ ಸಂಬಳ ಬರುತ್ತಿತ್ತು ಹಾಗೂ ನಂತರ ತಳವಾರ ಕೆಲಸ ಮಾಡಿರುವುದರಿಂದ ಪಿಂಚಣಿ ಸಹ ಬರುತ್ತಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ನಮ್ಮ ತಾತ ಗ್ರಾಮ ಚಾಕರಿ ಮಾಡುತ್ತಿರುವುದರಿಂದ ಸರ್ಕಾರದಿಂದ ಬಡವರಿಗೆ ಮಂಜೂರು ಮಾಡುವ ಜಮೀನುಗಳಲ್ಲಿ ಅವರಿಗೆ ಆದ್ಯತೆ ಸಿಗುತ್ತಿರಲಿಲ್ಲ ಎಂದರೆ ನನಗೆ ಮಾಹಿತಿ

ಇದ್ದಂತೆ ನಮ್ಮ ತಾತ ಗ್ರಾಮ ಚಾಕರಿ ಮಾಡುತ್ತಿರಲಿಲ್ಲ. ಕಳೆದ ಬಾರಿ ಸಾಕ್ಷಿ ವಿಚಾರಣೆಯ ನಂತರ ನಾನು ಮನೆಗೆ ಹೋಗಿ ಪರಿಶೀಲನೆ ಮಾಡಿದ್ದು, ದಾವಾ ಸ್ವತ್ತಿಗೆ ಸಂಬಂಧಿಸಿದ ಪಟ್ಟಾ ಪುಸ್ತಕ ಮತ್ತು ಇತರೆ ದಾಖಲೆಗಳು ಮೊದಲು ಮನೆಯಲ್ಲಿ ಇದ್ದು, ಮಳೆ ಬಂದು ಕೊಚ್ಚಿಕೊಂಡು ಹೋಗಿರುತ್ತದೆ ಎಂದು ಮಾಹಿತಿ ತಿಳಿದುಕೊಂಡಿರುತ್ತೇನೆ. ಹಾಗೆ ಘಟನೆ ನಡೆದಿರುವುದು ಸುಮಾರು 32 ವರ್ಷದ ಹಿಂದೆ. ದಾವಾ ಸ್ವತ್ತನ್ನು ನಾವು ಹರಾಜಿನಲ್ಲಿ ಖರೀದಿಸಿರುವುದಿಲ್ಲ. ಮಂಜೂರಾತಿ ಆದ ಸ್ವತ್ತುಗಳಾಗಿರುತ್ತವೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರಾಗಿದ್ದು, ಕಡುಬಡವರಾಗಿರುವುದರಿಂದ ಮಂಜೂರಾತಿ ಆಗಿರುತ್ತದೆ. ಮಂಜೂರಾತಿ ಆದ ನಂತರ ಇಂದಿನವರೆಗೂ ದಾವಾ ಸ್ವತ್ತಿನಲ್ಲಿ ಬೋರ್‌ವೆಲ್ ಹಾಕಿಸಿರುವುದಿಲ್ಲ. ನಿ.ಡಿ.1 ರಲ್ಲಿ ಇರುವ ಆಸ್ತಿಗಳಲ್ಲೂ ಸಹ ನಾವು ಬೋರ್‌ವೆಲ್ ಹಾಕಿಸಿರುವುದಿಲ್ಲ. ಸಾಗುವಳಿ ಈಗ ಮಾಡುತ್ತಿರುವುದಿಲ್ಲ. ಸದರಿ ಸ್ವತ್ತುಗಳಲ್ಲಿ ನಮ್ಮ ತಾತ ನೀಲಗಿರಿ ಗಿಡಗಳನ್ನು ಬೆಳೆಸಿರುತ್ತಾರೆ. ಜಮೀನಿನಲ್ಲಿ ಬೆಳೆದ ಬೆಳೆಗಳ ಬಗ್ಗೆ ರೈತರಿಗೆ ಸಾಮಾನ್ಯವಾಗಿ ಕೃಷಿ ಪುಸ್ತಕ ನೀಡುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಾವು ದಾವಾ ಸ್ವತ್ತಿನ ಬಗ್ಗೆ ಯಾವುದೇ ಕೃಷಿ ಸಾಲವನ್ನು ಪಡೆದುಕೊಂಡಿರುವುದಿಲ್ಲ. ದಾವಾ ಸ್ವತ್ತನ್ನು ನಾವು ಯಾವತ್ತೂ ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಮ್ಮ ತಾತನಿಂದ 7-8 ಎಕರೆ ಜಮೀನು ಬಂದಿದ್ದು, ಆ ಕಾಲದಲ್ಲಿ ನಮ್ಮ ತಾತ 16-18 ಎಕರೆ ಜಮೀನನ್ನು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ದಾವೆಯ ಪ್ರತಿವಾದಿಯನ್ನು ನ್ಯಾಯಾಲಯದ ಎದುರು ತೋರಿಸಲಾಗಿ ಸಾಕ್ಷಿಯು ಈ ದಾವೆಯ ಪ್ರತಿವಾದಿಯನ್ನು ನಾನು ಯಾವತ್ತೂ ನೋಡಿರುವುದಿಲ್ಲ, ಆದ್ದರಿಂದ ಗುರುತು ಹಿಡಿಯಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯ ಪ್ರತಿವಾದಿ ತಹಶೀಲ್ದಾರ್ ರವರ ಬಳಿ ಹೋಗಿ ದಾವಾ ಸ್ವತ್ತಿನ ಮಾಲೀಕ ತಾನು, ಆದ್ದರಿಂದ ನಮ್ಮ ತಂದೆಯ ಹೆಸರಿನಲ್ಲಿ ಪೌತಿ ಖಾತೆ ಮಾಡಬಾರದು ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ತಕರಾರಿನ ಬಗ್ಗೆ ಸುಮಾರು 2015 ನೇ ಇಸವಿಯಲ್ಲಿ ನಮಗೆ ತಿಳಿದುಬಂದಿರುತ್ತದೆ. ಆ ಪೂರ್ವದಲ್ಲಿ

ನಮಗೂ ಮತ್ತು ಪ್ರತಿವಾದಿಗೂ ಜಮೀನಿನ ವಿಚಾರದಲ್ಲಿ ಯಾವತ್ತೂ ಸಹ ತಕರಾರು ಆಗಿರಲಿಲ್ಲ. 2012 ನೇ ಇಸವಿಯಲ್ಲಿ ನಮಗೂ ಮತ್ತು ಪ್ರತಿವಾದಿಗೂ ತಕರಾರು ಆಗಿತ್ತು ಎಂದರೆ ಸರಿಯಲ್ಲ. ನಿ.ಪಿ.41 ನ್ನು ಈ ದಾವೆ ದಾಖಲಿಸುವಾಗ ನಮ್ಮ ತಂದೆ ಮಾಡಿಸಿಕೊಂಡು ಬಂದಿರುತ್ತಾರೆ ಎಂದರೆ ಮೊದಲಿನಿಂದಲೂ ಇತ್ತು ಎಂದು ನುಡಿಯುತ್ತೇನೆ. ನಿ.ಪಿ.41 ರ ದಿನಾಂಕ 06-01-2017 ಆಗಿರುತ್ತದೆ. ನಿ.ಪಿ.41 ದಾವೆ ದಾಖಲಿಸಲು ಪೂರಕವಾಗಿ ತಯಾರು ಮಾಡಿಕೊಂಡ ಕೆಲವು ದಾಖಲೆಗಳಲ್ಲಿ ಒಂದು ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿ ಇದೇ ಮೊದಲು ಬಾರಿ ಬಂದಿರುವುದಿಲ್ಲ, ಬೇರೆ ಆಸ್ತಿಗಳಲ್ಲೂ ನಾವು ಹಿಂದಿನಿಂದ ನೋಡಿಕೊಂಡು ಬಂದಿರುತ್ತೇವೆ ಎಂದರೆ ಸರಿ. ಬೇರೆ ಆಸ್ತಿಗಳ ಪತ್ರ ಹಾಗೂ ವ್ಯವಹಾರಗಳನ್ನು ನಮ್ಮ ತಂದೆ ಆಗಿನಿಂದಲೂ ನೋಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ಸರ್ಕಾರಿ ಬಾಬ್ತನ್ನು ಉಳಿಸಿಕೊಳ್ಳದೇ ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಬೇರೆ ಆಸ್ತಿಗಳ ಕಂದಾಯ ದಾಖಲೆಗಳನ್ನು ನಮ್ಮ ತಂದೆ ಸರಿಯಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಗಂಗವಾರ ಚೌಡಪ್ಪನ ಹಳ್ಳಿಯಲ್ಲಿ ಜೀಯಪ್ಪ, ಕೆಂಪೇಗೌಡ ಎನ್ನುವವರು ಯಾರೂ ಇಲ್ಲ. ನಿ.ಪಿ.15 ನ್ನು ನಾವೇ ಹಾಜರುಪಡಿಸಿರುತ್ತೇವೆ. ನಿ.ಪಿ.15 ನ್ನು ಪ್ರತಿವಾದಿಗೆ ಗೊತ್ತಾಗದ ಹಾಗೆ ನಾವೇ ಮಾಡಿಕೊಂಡಿದ್ದೆವು ಎಂದರೆ ಪ್ರತಿವಾದಿಗೆ ಗೊತ್ತಿರುವ ಹಾಗೇ ಮಾಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತೇನೆ. ದಾವಾ ಸ್ವತ್ತಿನ ಬಗ್ಗೆ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ವ್ಯಾಜ್ಯ ಇತ್ತು. ನಾವು ಖಾತೆ ಮಾಡಲು ವ್ಯಾಜ್ಯಗಳನ್ನು ದಾಖಲಿಸಿರುತ್ತೇವೆ. ತಹಶೀಲ್ದಾರ್ ರವರ ಎದುರು ಕೆಂಪೇಗೌಡ ಎಂಬ ವ್ಯಕ್ತಿ ಗೇಣಿ ಅರ್ಜಿ ದಾಖಲಿಸಿದ್ದರು. ಸದರಿ ಅರ್ಜಿ ವಜಾ ಆಗಿರುತ್ತದೆ. ಕೆಂಪೇಗೌಡ ಎಂಬ ವ್ಯಕ್ತಿ ಗಂಗವಾರ ಚೌಡಪ್ಪನ ಹಳ್ಳಿಯಲ್ಲಿ ಯಾರೂ ಇಲ್ಲ ಎಂದು ಪುನಃ ನುಡಿಯುತ್ತೇನೆ. ಸದರಿ ಅರ್ಜಿ 2006 ರಲ್ಲಿ ವಜಾ ಆಗಿರುತ್ತದೆ. ನಮ್ಮ ತಂದೆ ಸದರಿ ಪ್ರಕರಣವನ್ನು ನಡೆಸಿದ್ದರು. ಪ್ರತಿವಾದಿ ಮೇಲೆ ಹೇಳಿದ ಜೀಯಪ್ಪ ಮತ್ತು ಕೆಂಪೇಗೌಡ ಅವರ ಮನೆಯಲ್ಲಿ ಜೀತಕ್ಕೆ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ

ಊರಿನಲ್ಲಿ ಸದರಿ ಹೆಸರಿನ ವ್ಯಕ್ತಿಗಳು ಇಲ್ಲ. 1966 ರಲ್ಲಿ ಮೊದಲ ಬಾರಿಗೆ ಪ್ರತಿವಾದಿಗೆ ದಾವಾ ಸ್ವತ್ತು ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ನಾವು ಜೇಯಪ್ಪ ಮತ್ತು ಕೆಂಪೇಗೌಡ ಸೇರಿ 1998 ರಿಂದ ಈಚೆಗೆ ಅರ್ಜಿಗಳನ್ನು ಸಲ್ಲಿಸಿ ದಾವಾ ಆಸ್ತಿಗಳನ್ನು ಹೊಡೆಯಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿ ಮುತ್ಯಾಲಪ್ಪ ಅವರಿಗೆ ಮಂಜೂರು ಆಗಿದ್ದು, ದೊಡ್ಡ ರಾಮಪ್ಪನ ವಂಶಸ್ಥ ಮುತ್ಯಾಲಪ್ಪ ಅವರಿಗೆ ಆಗಿರುವುದಿಲ್ಲ ಎಂದರೆ ನಮಗೆ ಆಗಿರುತ್ತದೆ ಎಂದು ನುಡಿಯುತ್ತೇನೆ. ಹೆಸರಿನ ಸಾಮ್ಯತೆಯನ್ನು ಬಳಸಿಕೊಂಡು ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd./-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**